# KANNADA

---

***Maximum Marks: 80***

***Time Allowed: Three hours***

*(Candidates are allowed **additional 15 minutes** for **only** reading the paper.*

*They must **NOT** start writing during this time).*

---

*Answer **Questions 1, 2 and 3 in Section A** and **four** questions from **Section B** on **any three** out of the four prescribed textbooks.*

*The intended marks for questions or parts of questions are given in brackets [ ].*

---

## SECTION A

## LANGUAGE - 40 MARKS

**Question 1** **[15]**

Write a composition in approximately **400** words in **Kannada** on any **one** of the topics given below :—

ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ 'ಒಂದನ್ನು' ಆರಿಸಿ **400** ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ :—

(i) 'ವಿಜ್ಞಾನವು ಒಂದು ವರವೋ, ಶಾಪವೋ ?' – ಎಂಬುದನ್ನು ಉದಾಹರಣೆಯೊಂದಿಗೆ ವಿವರಿಸಿ.

(ii) ನೀವು ಇತ್ತೀಚೆಗೆ ಭೇಟಿ ನೀಡಿದ ಒಂದು ಐತಿಹಾಸಿಕ ಸ್ಥಳ, ಅದು ಎಲ್ಲಿದೆ ? ಅಲ್ಲಿಯ ವಿಶೇಷತೆ, ಅಲ್ಲಿ ನಿಮಗಾದ ಅನುಭವವನ್ನು ವರ್ಣಿಸಿ.

(iii) ಇಂದು ಪ್ರಕೃತಿ ವಿಕೋಪಗಳು ಒಂದರ ಹಿಂದೆ ಒಂದರಂತೆ ಆಗುತ್ತಿದೆ. ಇದಕ್ಕೆ ಪರಿಸರ ನಾಶವೇ ಕಾರಣ ಎಂದಾದರೆ, ಪರಿಸರವನ್ನು ಮಾನವ ಹೇಗೆ ಸಂರಕ್ಷಿಸಬೇಕು ಎಂಬುದನ್ನು ವಿವರಿಸಿ.

(iv) 'ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು' – ಈ ಗಾದೆ ಮಾತಿನ ಅರ್ಥವನ್ನು ವಿಸ್ತರಿಸಿ ತಾಯಿ ಮತ್ತು ತಾಯ್ನಾಡಿನ ಮಹತ್ವವನ್ನು ವಿವರಿಸುವ ಒಂದು ಪ್ರಬಂಧವನ್ನು ಬರೆಯಿರಿ.

(v) ಕೆಳಗೆ ನೀಡಲಾದ ಯಾವುದಾದರೂ ಒಂದು ವಿಷಯದ ಬಗ್ಗೆ ಮೂಲ ಕಥೆಯನ್ನು ಬರೆಯಿರಿ:

(a) '....... ಅದು ನನ್ನ ಜೀವನದಲ್ಲಿ ಒಂದು ಮರೆಯಲಾಗದ ದಿನವಾಗಿದೆ. ಈ ರೀತಿ ಕೊನೆಯಾಗುವ ಒಂದು ಕಥೆಯನ್ನು ಬರೆಯಿರಿ.

(b) ಗೆಳೆಯರೊಂದಿಗೆ ಸಮುದ್ರ ತೀರಕ್ಕೆ ಹೋದಾಗ, ಅಲ್ಲಿಯ ಸೂರ್ಯಾಸ್ತ, ಅಲ್ಲಿ ಮುದ ನೀಡಿದ ಉಲ್ಲಾಸದ ಕ್ಷಣಗಳನ್ನು ವಿವರಿಸಿ.

## Question 2

Read the passage given below carefully and answer the questions that follow, using your own words in **Kannada** :—

**ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನಗಳಿಗೆ ಉತ್ತರ ಬರೆಯಿರಿ** :—

ಇಂದು ಗಾಂಧೀಜಿ ಪ್ರಾರ್ಥನಾ ಸಭೆಯಲ್ಲಿ ಮಾತನಾಡುತ್ತ ಹಿಂದಿನ ದಿನ ಮನುಗಾಂಧಿ ಮತ್ತು ಆಭಾಗಾಂಧಿ ಪ್ರಾರ್ಥನೆಯ ತರುವಾಯ ಶ್ರೋತೃಗಳ ಕ್ಷಮೆ ಕೇಳಿದ ಪ್ರಸಂಗವನ್ನು ಪ್ರಸ್ತಾಪಿಸಿದರು. ರವಿವಾರ ಸಂಜೆಯ ಪ್ರಾರ್ಥನೆಯ ಸಭೆಯಲ್ಲಿ ಮನುಗಾಂಧಿ ಮತ್ತು ಆಭಾಗಾಂಧಿ ಭಜನೆಗಳನ್ನು ಹಾಡುತ್ತಿದ್ದಾಗ ಮಧ್ಯದಲ್ಲಿ ರಾಗ ಲಯ ತಪ್ಪಿದರು. ಜೋರಾಗಿ ನಕ್ಕು ಪ್ರಾರ್ಥನೆ ಸಭೆಯ ಪ್ರಶಾಂತ ವಾತಾವರಣವನ್ನು ಕಲುಷಿತಗೊಳಿಸಿದರು. ಈ ಹುಡುಗಿಯರ ನಡವಳಿಕೆ ಗಾಂಧೀಜಿಯ ಮನಸ್ಸಿಗೆ ತುಂಬ ನೋವುಂಟು ಮಾಡಿತು. ಪ್ರಾರ್ಥನೆಯ ಮಹತ್ವ ಅವರಿಗೆ ಅರಿವಾಗಿಲ್ಲ ಎಂದು ಗಾಂಧೀಜಿಗೆ ಅನಿಸಿತು. ಅನಂತರ ತಮ್ಮ ಅನುಚಿತ ವರ್ತನೆಗೆ ಮನುಗಾಂಧಿ ಮತ್ತು ಆಭಾಗಾಂಧಿ ಗಾಂಧೀಜಿಯ ಕ್ಷಮೆ ಕೇಳಿದರು.

ಆ ಹುಡುಗಿಯರ ಬಗ್ಗೆ ಗಾಂಧೀಜಿಗೆ ಎಳ್ಳಷ್ಟಾದರೂ ಸಿಟ್ಟಿರಲಿಲ್ಲ. ಗಾಂಧೀಜಿ ತಮ್ಮ ಬಗ್ಗೆಯೇ ಸಿಟ್ಟುಗೊಂಡಿದ್ದರು. ಆ ಹುಡುಗಿಯರು ಗಾಂಧೀಜಿಯ ಮಾರ್ಗದರ್ಶನದಲ್ಲಿಯೇ ತಮ್ಮ ವ್ಯಕ್ತಿತ್ವ ರೂಪಿಸಿಕೊಂಡಿದ್ದರು. ಪ್ರಾರ್ಥನೆಯ ಸಂದರ್ಭದಲ್ಲಿ ಸಂಪೂರ್ಣವಾಗಿ ಭಗವಂತನಲ್ಲಿ ಮನಸ್ಸನ್ನು ಕೇಂದ್ರೀಕರಿಸಿ ಏಕಾಗ್ರತೆ ಬೆಳೆಸಿಕೊಳ್ಳಬೇಕೆಂದು ತಾವು ಈ ಹುಡುಗಿಯರಿಗೆ ಯೋಗ್ಯ ಮಾರ್ಗದರ್ಶನ ನೀಡಿಲ್ಲವೇನೋ ಎಂದು ಗಾಂಧೀಜಿಗೆ ಅನಿಸಿತು. ಆದರೆ ಮನುಗಾಂಧಿ ಮತ್ತು ಆಭಾಗಾಂಧಿಗೆ ಪಶ್ಚಾತಾಪವಾಗಿರುವುದು ತಿಳಿದು ಗಾಂಧೀಜಿಯ ಮನಸ್ಸಿಗೆ ಸ್ವಲ್ಪ ನೆಮ್ಮದಿಯಾಯಿತು. ಅವರು ಸಾರ್ವಜನಿಕವಾಗಿ ಪ್ರಾರ್ಥನಾ ಸಭೆಯಲ್ಲಿ ಎಲ್ಲರ

ಕ್ಷಮೆ ಕೇಳಬೇಕೆಂದು ಗಾಂಧೀಜಿ ಸೂಚಿಸಿದ್ದರು. ತಪ್ಪು ಮಾಡಿದ ವ್ಯಕ್ತಿ ಸಾರ್ವಜನಿಕವಾಗಿ ತಪ್ಪೊಪ್ಪಿಗೆಗೆ ಸಿದ್ಧನಾದರೆ, ಆ ವ್ಯಕ್ತಿಯ ಆತ್ಮ ಪರಿಶುದ್ಧವಾಗುತ್ತದೆ. ತಪ್ಪಿತಸ್ಥನನ್ನು ಮುಂದೆಂದೂ ಅಂತಹ ತಪ್ಪು ಮಾಡದಂತೆ ರಕ್ಷಿಸುತ್ತದೆ ಎಂದು ಗಾಂಧೀಜಿ ನಂಬಿದ್ದರು.

ಪ್ರಾರ್ಥನಾ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಗಾಂಧೀಜಿ ಆ ದಿನದ ಘಟನಾವಳಿಗಳ ಬಗ್ಗೆ ಪ್ರಸ್ತಾಪಿಸಿದರು. ಈ ದಿನ ಗಾಂಧೀಜಿಯನ್ನು ರಾವಲ್‌ಪಿಂಡಿ ಹಾಗೂ ದೇರಾಘೌಜಿ ಖಾನ್‌ನ ಹಿಂದೂ ಮತ್ತು ಸಿಖ್ಖರ ನಿಯೋಗವೊಂದು ಭೇಟಿಯಾಗಿತ್ತು. ಒಂದು ಕಾಲದಲ್ಲಿ ಹಿಂದೂಗಳು ಸಿಖ್ಖರು ರಾವಲ್‌ಪಿಂಡಿಯಲ್ಲಿ ನೆಮ್ಮದಿಯಿಂದ ಬಾಳುತ್ತಿದ್ದರು. ಇಂದು ಅವರೆಲ್ಲ ನಿರಾಶ್ರಿತರಾಗಿ ದಿಲ್ಲಿಗೆ ಹಿಂದಿರುಗಿದ್ದಾರೆ. ಆಧುನಿಕ ಲಾಹೋರ್‌ನ ಸಮೃದ್ಧಿಗೆ ಹಿಂದೂಗಳೂ ಸಿಖ್ಖರೂ ಕಾರಣರಲ್ಲವೆ ? ಆದರೆ ಇಂದು ಅವರೆಲ್ಲ ತಮ್ಮ ತಾಯ್ನಾಡಿನಿಂದ ಹೊರದಬ್ಬಲ್ಪಟ್ಟಿದ್ದಾರೆ. ಇವನ್ನೆಲ್ಲ ಯೋಚಿಸಿ ಗಾಂಧೀಜಿ ಬಹಳ ನೊಂದುಕೊಂಡರು. ಅಲ್ಲಿ ಉಳಿದಿರುವ ಹಿಂದೂಗಳಿಗೆ ಸಿಖ್ಖರಿಗೆ ಪಾಕಿಸ್ತಾನದ ಆಡಳಿತ ಸಂಪೂರ್ಣ ರಕ್ಷಣೆಯ ಭರವಸೆ ನೀಡಬೇಕು ಎಂದರು ಗಾಂಧೀಜಿ. ರಾವಲ್ಪಿಂಡಿಯಲ್ಲಿ ಇನ್ನೂ 18,000 ಹಿಂದೂಗಳು, ಸಿಖ್ಖರು ವಾಘ ಶಿಬಿರದಲ್ಲಿ 30,000 ಹಿಂದೂಗಳು ಸಿಖ್ಖರು ಉಳಿದಿದ್ದಾರೆ ಎಂದು ಯಾರೊ ಗಾಂಧೀಜಿಗೆ ತಿಳಿಸಿದರು. ಒಮ್ಮೆ ಪಂಜಾಬಿಗೂ ಪಾಕಿಸ್ತಾನಕ್ಕೂ ಭೇಟಿನೀಡಬೇಕೆಂದು ಅನೇಕ ಹಿಂದೂಗಳು ಗಾಂಧೀಜಿಯನ್ನು ಒತ್ತಾಯಿಸಿದರು. ಯಾವುದೇ ಸಂರಕ್ಷಣಾ ವ್ಯವಸ್ಥೆಯನ್ನೂ ಮಾಡಿಕೊಳ್ಳದೆ ದೇವರ ನಾಮ ಸ್ಮರಣೆಯೊಂದನ್ನೇ ರಕ್ಷಣೆಯ ಅಸ್ತ್ರವಾಗಿ ಮಾಡಿಕೊಂಡು ಗಾಂಧೀಜಿ ಪಾಕಿಸ್ತಾನಕ್ಕೆ ಹೋಗಲು ಬಯಸಿದ್ದರು. ಅಲ್ಲಿ ಯಾರಾದರೂ ತಮ್ಮ ಪ್ರಾಣತೆಗೆಯಲು ಬಯಸಿದರೆ ಅವರ ಕೈಯಲ್ಲಿ ಸಂತಸದಿಂದ ಪ್ರಾಣತ್ಯಾಗ ಮಾಡಲು ಬಯಸಿದ್ದರು.

**ಪ್ರಶ್ನೆಗಳು:**

(i) ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿಯ ಮನಸ್ಸಿಗೆ ನೋವುಂಟು ಮಾಡುವಂತೆ ನಡೆದ ಘಟನೆ ಯಾವುದು. **[3]**

(ii) ಗಾಂಧೀಜಿ ತಮ್ಮ ಬಗ್ಗೆಯೇ ಸಿಟ್ಟುಗೊಂಡದ್ದೇಕೆ ? **[3]**

(iii) ಸಾರ್ವಜನಿಕವಾಗಿ ಕ್ಷಮೆ ಕೇಳುವ ವಿಚಾರದಲ್ಲಿ ಗಾಂಧೀಜಿಯವರಿಗಿದ್ದ ನಂಬಿಕೆ ಎಂಥದು ? **[3]**

(iv) ಹುಡುಗಿಯರು ನಕ್ಕು ಪ್ರಾರ್ಥನೆ ಸಭೆಯ ಪ್ರಶಾಂತ ವಾತಾವರಣ ಕಲುಷಿತವಾಯಿತು.

(a) ಈ ಮೇಲಿನ ವಾಕ್ಯದಿಂದ ಗಾಂಧೀಜಿಯವರಲ್ಲಿ ಉಂಟಾದ ಭಾವನೆ. **[1]**

(1) ನೋವು

(2) ಸಂತೋಷ

(3) ಆಶ್ಚರ್ಯ

(4) ಭಯ

(b) ಪ್ರಾರ್ಥನೆಯ ಸಂದರ್ಭದಲ್ಲಿ ಬೆಳಿಸಿಕೊಳ್ಳಬೇಕಾಗಿರುವುದು. **[1]**

(1) ಕೋಪ

(2) ಏಕಾಗ್ರತೆ

(3) ಗಡಸುತನ

(4) ಒರಟುತನ

(c) ಮಾಡಿದ ತಪ್ಪುಗಳಿಗೆ ವಿಷಾದ ಅನಿಸಿದರೆ ಅದು __________ **[1]**

(1) ಪಕ್ಷಪಾತ

(2) ಪಶ್ಚಾತಾಪ

(3) ಪ್ರಶಾಂತತೆ

(4) ಪ್ರಯೋಜನ

(v) ತಪ್ಪು ಮಾಡಿದ ವ್ಯಕ್ತಿ ಸಾರ್ವಜನಿಕವಾಗಿ ತಪ್ಪೊಪ್ಪಿಗೆಗೆ ಸಿದ್ಧನಾದರೆ ಆ ವ್ಯಕ್ತಿಯ ಆತ್ಮ ಪರಿಶುದ್ಧವಾಗುತ್ತದೆ.

(a) ವ್ಯಕ್ತಿಯ ಆತ್ಮ ಪರಿಶುದ್ಧವಾಗುವುದು __________ **[1]**

(1) ತಪ್ಪೊಪ್ಪಿಗೆಗೆ ಸಿದ್ಧನಾಗದಿದ್ದರೆ

(2) ತಪ್ಪೊಪ್ಪಿಗೆಗೆ ಸಿದ್ಧನಾದರೆ

(3) ತಪ್ಪು ಮಾಡಿದರೆ

(4) ಸಾರ್ವಜನಿಕವಾಗಿ ತಪ್ಪೊಪ್ಪಿಗೆಗೆ ಸಿದ್ಧನಾದರೆ

(b) 'ನಿರಾಶ್ರಿತ' ಎದರೆ __________ [1]

(1) ಆಶ್ರಯ ಇದ್ದವರು

(2) ಆಶ್ರಯ ಇಲ್ಲದವರು

(3) ಅರಮನೆಯಲ್ಲಿರುವವರು

(4) ನೀರಿನಲ್ಲಿರುವವರು

(c) 'ಭರವಸೆ' ಇದಕ್ಕೆ ಸಮಾನ ಅರ್ಥ ಕೊಡುವ ಪದ [1]

(1) ಭಯಂಕರ

(2) ನಂಬಿಕೆ

(3) ಭಯಭೀತಿ

(4) ಸೋಲು

## Question 3

**(A)** Answer the following questions as per the instructions given :—

ಕೆಳಗಿನ ವಾಕ್ಯಗಳನ್ನು ಸೂಚನೆಗಳಿಗನುಸಾರವಾಗಿ ಬರೆಯಿರಿ :—

(i) ಕೆಳಗಿನ ವಾಕ್ಯದ ಶುದ್ಧ ರೂಪ ಬರೆಯಿರಿ. [1]

ಯಾಜಮಾನನು ಹಾಳುಗಳಿಗೆ ಕೆಲಸ ಮಾಡಲು ಹೇಳಿದನು.

(ii) ಬಿಟ್ಟು ಹೋಗಿರುವ ವಿಭಕ್ತಿ ಪ್ರತ್ಯಯವನ್ನು ಸೇರಿಸಿ ಬರೆಯಿರಿ. [1]

ಕೈದೋಟ __________ ಅಂದದ ಹೂಗಳಿವೆ.

(iii) ಕೆಳಗಿನ ವಾಕ್ಯಗಳಲ್ಲಿ ಸರಿಯಾದ ವಾಕ್ಯವನ್ನು ಆರಿಸಿ ಬರೆಯಿರಿ. [1]

(a) ಕುಂಬಾರನು ಮಡಿಕೆಗಳನ್ನು ಮಾಡದನು.

(b) ಕುಂಬಾರನು ಚಿನ್ನದ ಕೆಲಸವನ್ನು ಮಾಡಿದನು.

(c) ಕುಂಬಾರನು ಇಟ್ಟಿಗೆಗಳನ್ನು ತಯಾರಿಸಿದನು.

(d) ಕುಂಬಾರನು ಬೇಸಾಯಗಳಿಗೆ ಮಾಡದನು.

(iv) ತಪ್ಪಾದ ವಾಕ್ಯವನ್ನು ಆರಿಸಿ ಬರೆಯಿರಿ. [1]

(a) ಕರೀಮನು ಶಾಲೆಗೆ ಹೋದನು.

(b) ಅರಳಿ ನಿಂತ ಹೂಗಳು ನೋಡಲು ಚಂದ.

(c) ರೈತನಿಗೆ ಭೂಮಿಯನ್ನು ಉಳುಮೆ ಮಾಡಿದನು.

(d) ಶಿಕ್ಷಕರು ಶಾಲೆಗೆ ಹೋದರು.

(v) ಕೆಳಗಿನ ವಾಕ್ಯದಲ್ಲಿ ಗೆರೆ ಎಳೆದ ಪದದ ಇನ್ನೊಂದು ಅರ್ಥ ಬರೆಯಿರಿ. [1]

ನನ್ನ ಹುಟ್ಟುಹಬ್ಬಕ್ಕೆ ಸಿಹಿ ತಿಂಡಿಯನ್ನು <u>ಹಂಚಿದೆ</u>.

(a) ಖರೀದಿಸಿದೆ

(b) ವಿತರಿಸಿದೆ

(c) ಬೆಳಗಿದೆ

(d) ಹರಡಿದೆ

(B) Use the idioms in the sentence as per the instructions given :—

ಸೂಚನೆಗಳಿಗನುಸಾರವಾಗಿ ಕೆಳಗಿನ ಗಾದೆಗಳನ್ನು ಬರೆಯಿರಿ :—

(i) ಕೆಳಗಿನ ಗಾದೆಯ ಅರ್ಥ ಬರೆಯಿರಿ. [1]

ಕಟ್ಟುವುದು ಕಠಿಣ ಕೆಡಿಸುವುದು ಸುಲಭ

(ii) ಕೆಳಗಿನ ಗಾದೆಯನ್ನು ಸರಿಪಡಿಸಿ ಬರೆಯಿರಿ. [1]

ಚಿಂತೆಯೇ ಮುಪ್ಪು, ಸುಖವೇ ಜೀವನ

(iii) ಕೆಳಗಿನ ವಾಕ್ಯಕ್ಕೆ ಸರಿಹೊಂದುವ ಗಾದೆಯನ್ನು ಆರಿಸಿ ಬರೆಯಿರಿ. [1]

ನ್ಯಾಯ ಹೇಳುವವರೆ ತಪ್ಪು ಮಾಡುವುದು __________

(a) ವಿನಾಶಕಾಲೇ ವಿಪರೀತ ಬುದ್ಧಿ

(b) ಬೇಲಿನೇ ಎದ್ದು ಹೊಲ ಮೇದ ಹಾಗೆ

(c) ಆಪತ್ತಿಗಾದವನೇ ನೆಂಟ

(d) ಬೆಳ್ಳಗಿರೋದೆಲ್ಲ ಹಾಲಲ್ಲ

(iv) ಕೆಳಗಿನ ಗಾದೆ ಮಾತನ್ನು ಪೂರ್ಣಗೊಳಿಸಿ. **[1]**

ಊರಿಗೆ ಅರಸನಾದರೂ __________

(a) ತಂದೆಗೆ ಮಗನೇ

(b) ತಾಯಿಗೆ ಮಗನೇ

(c) ಪ್ರಜೆಗಳಿಗೆ ರಾಜನೇ

(d) ಎಲ್ಲರಿಗೂ ರಾಜನೆ

(v) ಪ್ರಾಣಿಗಳಿಗೆ ಸಂಬಂಧಿಸಿದ ಈ ಗಾದೆಯನ್ನು ಪೂರ್ಣಗೊಳಿಸಿ **[1]**

ಎತ್ತಿಗೆ ಜ್ವರ ಬಂದರೆ __________

(a) ಮಾಣಿಕ್ಯ ಕೊಟ್ಟ ಹಾಗೆ

(b) ಎಮ್ಮೆಗೆ ಬರೆ ಹಾಕಿದರಂತೆ

(c) ಕಸ್ತೂರಿ ವಾಸನೆ

(d) ಆಕಳು ಕಪ್ಪೇ

## SECTION B

## LITERATURE - 40 MARKS

*Answer **four** questions from this section on **any three** out of the four prescribed textbooks.*

ನಿಗದಿತ **ನಾಲ್ಕು** ಪಠ್ಯಪುಸ್ತಕಗಳಲ್ಲಿ **ಯಾವುದಾದರೂ ಮೂರರಲ್ಲಿ** ಈ ವಿಭಾಗದಿಂದ ಮೂರು ಪ್ರಶ್ನೆಗಳಿಗೆ ಉತ್ತರಿಸಿ.

### ಕನ್ನಡ ಕಿರಣ [KANNADA KIRANA]

### Question 4

ಅತ್ತೆ ಮಾವಂದಿರು ಅನುಮತಿ ಕೊಡಲು ಸಾವಿತ್ರಿಯು ಮೇಲೆ ಸಂತೋಷದಿಂದ ನಗುತ್ತ ಒಳಗೆ ಹೃದಯದಲ್ಲಿ ನೋಯುತ್ತ, ಗಂಡನೊಡನೆ ಹೊರಟಳು.

(i) ಗಂಡನೊಡನೆ ಹೊರಟ ಸಾವಿತ್ರಿ ಸುಂದರ ಕಾಡಿನಲ್ಲಿ ಕಂಡ ದೃಶ್ಯಗಳೇನು ? **[1]**

(ii) ಸೌದೆಯನ್ನು ಸೀಳುತ್ತಿದ್ದ ಸತ್ಯವಂತನು ಸಾವಿತ್ರಿಯ ಬಳಿ ಹೋಗಿ ಏನು ಹೇಳಿದ ? [2]

(iii) ಸತ್ಯವಂತನ ಬಳಿನಿಂತ ವ್ಯಕ್ತಿ ಯಾರು ? ಅವನ ರೂಪ ಹೇಗಿತ್ತು ? [2]

(iv) ಸಾವಿತ್ರಿ ಆರ್ತಧ್ವನಿಯಿಂದ ಯಮನಲ್ಲಿ ಏನು ಕೇಳಿದಳು ? ಅವನು ಬಂದ ಉದ್ದೇಶವೇನಾಗಿತ್ತು ? ನಂತರ ಸಾವಿತ್ರಿಗೆ ಹೇಳಿದ ಮಾತುಗಳೇನು ? [5]

## Question 5 [10]

ವಿಷ್ಣೋಯಿ ಪಂಥದವರು ಪರಿಸರ ಸಂರಕ್ಷಣೆಯಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಂಡಿದ್ದರು ? ವಿವರಿಸಿ.

## Question 6 [10]

ರವೀನ ಕೇಳಿದಿ ಏನು ? ಎಂದು ತಂದೆ ಕೇಳಿದಾಗ ತಾಯಿಯ ಉತ್ತರವೇನಾಗಿತ್ತು ? ಅದು ರವಿಯ ಕಿವಿಗೆ ಬಿದ್ದಾಗ ಅವನಲ್ಲಾದ ಬದಲಾವಣೆ ಏನು ?

## ಕಾವ್ಯ ಸುಧೆ (KAVYA SUDHE)

## Question 7

ತಲಿಮ್ಯಾಲ ಹೊರಿಯೊಂದ / ಬದಲಾಗ ಕೂಸೊಂದ

ಬಂದಾಳ ಬಾಲಿ ಬಂದಾಳ / ಹೊಲದಿಂದ ಬಂದಾಳ

(i) ಕವಿ ಮಧುರ ಚೆನ್ನ ಅವರ ಪ್ರಕಾರ ಸುಖಜೀವನ ಎಂದರೇನು ? [1]

(ii) ಹೊಲದ ಕೆಲಸ ಮುಗಿಸಿ ಬಾಲೆ ಮನೆಯ ಕಡೆ ಹೊರಟ ರೀತಿಯನ್ನು ವಿವರಿಸಿ [2]

(iii) ಮರಿಬಂದು ಬಾಗಿಲಕ ಕುರಿ ಹೋಗಿ ಮರಿನೆಕ್ಕಿ /

ತಾ ಶಿಶುವ ಮುದ್ದಿಕ್ಕಿ ಕರಿಗೊಂಬಿ ಕಟಗೀದ – ಈ ವಾಕ್ಯದ ಸಂದರ್ಭ ಸ್ವಾರಸ್ಯವನ್ನು ಬರೆಯಿರಿ. [2]

(iv) ಹೊಲ, ಮನೆಯನ್ನು ಮರೆತು ಮಲಗಿದ ಬಾಲೆಗೆ ಯಾರ ಕನಸಾಯಿತು ವಿವರಿಸಿ. [5]

## Question 8 **[10]**

ಕವಿ ಸದಾನಂದ ಶರ್ಮಾ ಅವರು, "ಇರುಳೇ ನೀನಿಂದು ಸರಿಯದಿರು" ಎಂದು ಏಕೆ ಕೈಮುಗಿದು ಬೇಡುತ್ತಿದ್ದಾರೆ ? ವಿವರಿಸಿ.

## Question 9 **[10]**

ನಾಗರಿಕತೆಯ ಜೀವನಾಡಿಯಾದ ರೈಲಿನ ಅಂತರಂಗದ ವರ್ಣನೆ ಹೇಗಿದೆ ? ವಿವರಿಸಿ.

# ಪ್ರೇಮ ಭಿಕ್ಷು (PREMA BHIKSHU)

## Question 10

ಅಂಗುಲೀಮಾಲನ ಗುಹೆಗಳ ಸಮೂಹದಲ್ಲಿ ಅತ್ಯಂತ ವಿಶಾಲವಾದ ಒಂದರಲ್ಲಿ ಎತ್ತರವಾದ ಪೀಠದ ಮೇಲೆ ಕುಳಿತು ಬುದ್ಧ ಭಗವಂತ ಈ ಮಾತುಗಳನ್ನು ನುಡಿದ.

(i) ಅಂಗುಲೀಮಾಲನ ಅನುಯಾಯಿಗಳು ಬುದ್ಧನ ಬಗ್ಗೆ ತಿಳಿದದ್ದೇನು ? **[1]**

(ii) ಚಂದನದ ಕರಂಡದ ಕೆಳಗೆ ಕೆತ್ತಿದ ಮಾತುಗಳೇನು ? **[2]**

(iii) ರಾಜಗೃಹಕ್ಕೆ ಹೋದ ಭಿಕ್ಷು ಸೋದರರು ಏನು ಮಾಡಿದರು ? **[2]**

(iv) ಕಶ್ಯಪ ಮತ್ತು ಬುದ್ಧನಲ್ಲಿ ನಡೆದ ಸಂಭಾಷಣೆಯನ್ನು ವಿವರಿಸಿ. **[5]**

## Question 11 **[10]**

ವೈದೇಹಿಯ ಗುಣ ಪರೀಕ್ಷೆಯ ಕಥೆಯ ಸ್ವಾರಸ್ಯವನ್ನು ವಿವರಿಸಿ.

## Question 12 **[10]**

ಮಗಧ ದೇಶದಲ್ಲಿ ಪ್ರಾಣಿ ವಧೆಯನ್ನು ನಿಲ್ಲಿಸಲು ಬುದ್ಧನ ಕಾರಣನಾದ ಘಟನೆಯ ಹಿನ್ನಲೆಯನ್ನು ವಿವರಿಸಿ.

## ಹೆಬ್ಬೆರಳು (HEBBERALU)

### Question 13

ಬೆಂಕಿ ತಳೆಯದೆ ಹೊಗೆಯ ? ಬೆಟ್ಟ ತಾಳದೆ ಹುಲ್ಲ ?

ಗಂಗೆಗೆರೆದಾ ಹೆಂಡ ಗಂಗೆಯಾಗದೆ ದೇವ ?

(i) ಈ ಮೇಲಿನ ಮಾತಿನ ಅರ್ಥ ತಿಳಿಸಿ. **[1]**

(ii) ದ್ರೋಣರು ಕೈಯೆತ್ತಿ ಏಕಲವ್ಯನಿಗೆ ಏನೆಂದು ಹರಸಿದರು ? **[2]**

(iii) ಏಕಲವ್ಯನು ತನ್ನ ಪ್ರಾಥಮಿಕ ಬಿಲ್ವಿದ್ಯೆಯಲ್ಲಿ ಯಾವ ಯಾವ ವಿದ್ಯೆಗಳನ್ನು ಕಲಿತ್ತಿದ್ದನು ? **[2]**

(iv) ಏಕಲವ್ಯನನ್ನು ದ್ರೋಣರ ಬಳಿಗೆ ಕಳುಹಿಸಲು ಹಿರಣ್ಯಧನುವಿಗೆ ಇಷ್ಟವಿರಲಿಲ್ಲ ಏಕೆ ? ಮಗನಿಗೆ ಅವನು ಹೇಳುವ ಬುದ್ಧಿವಾದಗಳೇನು ? **[5]**

### Question 14 **[10]**

ಏಕಲವ್ಯನಿಗೆ ವಿದ್ಯೆ ಕಲಿಸುವ ಬಗ್ಗೆ ಗುರು ದ್ರೋಣರ ವಿರೋಧ ಹಾಗೂ ಕಾರಣಗಳನ್ನು ವಿವರಿಸಿ.

### Question 15 **[10]**

'ಹೆಬ್ಬೆರಳು' ನಾಟಕದಲ್ಲಿ ಹಿರಣ್ಯಧನುವಿನ ಪಾತ್ರದ ವರ್ಣನೆ ಮೂಡಿ ಬಂದಿರುವುದನ್ನು ಸಂಕ್ಷಿಪ್ತವಾಗಿ ಬರೆಯಿರಿ.